ಹರಳಹಳ್ಳಿ ಪುಟ್ಟರಾಜು, ಪಾಂಡವಪುರ
*ಜನರ ಭವಿಷ್ಯ ಹೇಳುವ ಜ್ಯೋತಿಷಿಗೆ ತನ್ನ ಭವಿಷ್ಯ ಏಕೆ ಗೊತ್ತಿರುವುದಿಲ್ಲ?*




ಜನರ ಭವಿಷ್ಯವೂ ಗೊತ್ತಿರುವುದಿಲ್ಲ, ಹೇಳುತ್ತಾನಷ್ಟೆ.

ಎಂ.ಬಿ. ಕೃಷ್ಣಮೂರ್ತಿ, ಚಾಮರಾಜನಗರ
*ಹೆತ್ತವರು ತಮ್ಮ ಮಕ್ಕಳಿಂದ ಏನನ್ನು ನಿರೀಕ್ಷಿಸಬಹುದು?*
ಬೇಡಿಕೆಗಳನ್ನು!

ಡೈರಿ ವಿಶ್ವನಾಥ್, ಬೆಂಗಳೂರು
*ಸ್ವಯಂಸೇವಾ ಪದ್ಧತಿ ಉತ್ತಮವೆ?*
ಕಟಿಂಗ್ ದುಬಾರಿಯಾಗಿರುವ ಈ ದಿನಗಳಲ್ಲಿ ಸ್ವಯಂ–ಶೇವಾ(shave) ಪದ್ಧತಿಯಂತು ಉತ್ತಮ!

ಎ.ಪಿ. ರೇಣುಕಾ, ಮೈಸೂರು
*ಜೀವನವೇ ಪಾಠ ಕಲಿಸುತ್ತದೆ. ಮತ್ತ್ಯಾಕೆ ಶಾಲೆ, ಕಾಲೇಜುಗಳು?*
ಲೆಕ್ಕಾಚಾರವಾಗಿ ಬದುಕಲು!

ಆರ್. ಮಧುಸೂದನ್, ಹಾಸನ
*ದೇವರು ಕೂಗಿ ಕರೆದರೆ ಬರುತ್ತಾನಾ, ಬಾಗಿ ಕರೆದರೆ ಬರುತ್ತಾನಾ...?*



ಭಕ್ತಿಪಥದಲ್ಲಿ ಸಾಗಿ ಕರೆದರೆ ಬರುತ್ತಾನೆ.

ರವೀಂದ್ರನಾಥ ಶಿ. ಯಡಹಳ್ಳಿ, ಬೀಳಗಿ
*ರಕ್ತಪರೀಕ್ಷೆಗೂ, ಪ್ರೇಮಪರೀಕ್ಷೆಗೂ ಇರುವ ವ್ಯತ್ಯಾಸವೇನು ಗುರು?*
ಇಲ್ಲಿ ಸಕ್ಕರೆಯ ಅಂಶ ತಿಳಿಯುತ್ತದೆ, ಅಲ್ಲಿ ಅಕ್ಕರೆಯ ಅಂಶ ತಿಳಿಯುತ್ತದೆ!

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ
*ಭಾರತಕ್ಕೆ ಇಂದಿಗೂ ಧೃತರಾಷ್ಟ್ರನಂತಹ ನಾಯಕತ್ವವೇ ಇದೆಯಲ್ಲಾ ರಾಂಜೀ?*
ಭೀಮನಂತಹವರು ಅಡಿಗೆ ಭಟ್ಟರಾಗಿ, ಅರ್ಜುನನಂತಹವರು ಬೃಹನ್ನಳೆಯಾಗಿರುವಾಗ ಇನ್ನೇನಾಗಲು ಸಾಧ್ಯ ಬಿಡಿ.

ನೇ. ಶಿವಕುಮಾರ್, ಶಿರಾ
*ಬಿಗ್‌ಬಾಸ್ ಮನೆಗೂ, ಪರಪ್ಪನ ಅಗ್ರಹಾರದ ಜೈಲಿಗೂ ಇರುವ ಭಿನ್ನತೆ ಏನು ಗುರು?*
ಜೈಲಿನಲ್ಲಿ ಯಾರೂ ಯಾರಿಗೂ ತಿಕ್ಕಲುತಿಕ್ಕಲಾಗಿ ಆಡಲು ಆದೇಶ ನೀಡುವುದಿಲ್ಲ!

ಹಾಡ್ಯ ಬಿ. ಜಯಾನಂದ, ಮೈಸೂರು
*ಯಮದೂತರಿಗೆ ವಿಆರ್‌ಎಸ್ ಕೊಡಿಸಿದರೆ ಏನಾಗಬಹುದು?*
ಫ್ರೆಷ್ ಆಗಿ ಅಪಾಯಿಂಟ್ ಆದವರು ಇನ್ನೂ ಬಿರುಸಾಗಿ ಕೆಲಸ ಮಾಡಬಹುದು!

ಎನ್.ಎಂ. ಶಿವಶಂಕರ್, ಮೈಸೂರು
*ರಾಮ್‌ಜಿ, ಶತ್ರುವಿಗೂ, ಹಿತಶತ್ರುವಿಗೂ ವ್ಯತ್ಯಾಸವೇನು?*
ಶತ್ರು ಕಾದಾಡುತ್ತಾನೆ, ಹಿತಶತ್ರು ಕಾದು ಆಡುತ್ತಾನೆ!

ಎಂಎಸ್. ಗುರುರಾಜಾಚಾರು, ಬಳ್ಳಾರಿ
*ಹೆಣ್ಣು ಮದುವೆಗೆ ಮುಂಚೆ ದಿನಪತ್ರಿಕೆ. ಮದುವೆಯ ನಂತರ?*
ಅಡಿಗೆಮನೆಯಿಂದ ಆಗಾಗ್ಗೆ ಏರುದನಿಯಲ್ಲಿ ಹೊರಡುವ ಬ್ರೇಕಿಂಗ್ ನ್ಯೂಸ್!

ಮಂಜುಳ ಪ್ರಸನ್ನ, ಮೈಸೂರು
*ಎಲ್ಲಾ ಎರಡೆರಡು ಎಂಬುದಿರುವಾಗ ದೇವರ ಮುಂದೆ ನಂದಾದೀಪ ಒಂದೇ ಏಕೆ?*
ದೇವನೊಬ್ಬನೇ ಅಲ್ಲವೇ; ಒನ್ ದೀಪ ಪರ್ ಹೆಡ್ ಸಾಕಂತೆ!

ಓಂಚನ್ನೇಶ್, ಅರಬಿಳಚಿ ಕ್ಯಾಂಪ್
*ಹನುಮಂತನ ದೇವಸ್ಥಾನಕ್ಕೆ ಹೆಚ್ಚಾಗಿ ಯುವತಿಯರೇ ಹೋಗಲು ಕಾರಣವೇನು?*
ಅವನಂತೆಯೇ ಸೇವೆಯಲ್ಲಿ ಶ್ರೇಷ್ಠನೂ, ಸಿಕ್ಸ್ ಪ್ಯಾಕ್ ಆಬ್ಸ್ ಉಳ್ಳವನೂ ತಮಗೆ ದೊರಕಲೆಂದು ಬೇಡಲು!

ಜಯದೇವ ಹಲಕಿ, ಗೋಕಾಕ್ ಫಾಲ್ಸ್
*ಕೋಟ್ಯಾಧಿಪತಿಯಾಗಲು ಸರಳ ಮಾರ್ಗ ಯಾವುದು ರಾಮ್‌ಜೀ?*
ಜೋಕೆ! ಸರಳ ಮಾರ್ಗ ಹಿಡಿದರೆ ಸರಳುಗಳ ಹಿಂದೆ ಹೋಗುವುದೇ ಖಾತ್ರಿ!

## ಬಹುಮಾನಿತ ಪ್ರಶ್ನೆ

ವಿಷ್ಣುಶಂಕರ್, ಶಿವಮೊಗ್ಗ
*ನನ್ನವಳಿಗೆ ಸಿಡುಕುಮೋರೆಯ ಚೆಲುವೆ ಎಂದರೆ ನಗುತ್ತಾಳಲ್ಲಾ...?*
ಚೆಲುವೆ ಎಂದಿದ್ದನ್ನು ಮಾತ್ರ ಕೇಳಿಸಿಕೊಳ್ಳುತ್ತಾಳೆ; ಜಾಣಕಿವುಡಿ!

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ
ಒಂದು ರೂಪಾಯಿಗೆ ಎಲ್ಲವೂ ಸಿಗುವ ಕಾಲ ಬಂದಿರುವಾಗ ಇದೇ ರಾಮರಾಜ್ಯವಲ್ಲವೇ?
ಅಲ್ಲ, ಸಿದ್ದರಾಮರಾಜ್ಯ!

ವೆಂಕಟೇಶ ಇಂಗಳೆ, ರಾಮದುರ್ಗ
*ಇಲ್ಲೊಬ್ಬ ಗಂಡ ತನ್ನ ಹೆಂಡತಿಯ ಪಾದಕ್ಕೆ ನಮಸ್ಕರಿಸಿ ಪೂಜೆ ಮಾಡುತ್ತಾನಲ್ಲಾ...?*
ಅದು ಹಾಗಲ್ಲ; ಫುಲ್ ಟೈಟ್ ಆಗಿರ್ತಾನೆ, ಏಳಕ್ಕಾಗಿರಲ್ಲ ಅಷ್ಟೆ!

ಜೆ.ಸಿ. ರವಿಕುಮಾರ್, ಜಯಸುವರ್ಣಪುರ
*ಹೆಂಡತಿಯನ್ನು ಯಾವ ವೇಳೆ ಹೊಗಳಿದರೆ ಒಳ್ಳೆಯದು?*
ದಿನಕ್ಕೇ ನಾಲ್ಕೇ ಹೊತ್ತು ಹೊಗಳಿದರೆ ಸಾಕು – ಬೆಳಗ್ಗೆ, ಮಧ್ಯಾಹ್ನ, ಸಾಯಂಕಾಲ, ರಾತ್ರಿ.

ಕೆ.ಎಂ. ಲಿಂಗರಾಜು, ನಂಜನಗೂಡು
*ಇಷ್ಟಪಟ್ಟು ಪ್ರೀತಿಸಿ, ಮದುವೆಯಾಗಿ, ಕಷ್ಟಪಟ್ಟು ಸಂಸಾರ ಮಾಡುತ್ತಾರಲ್ಲಾ...?*



ಪ್ರೀತಿ ಮಧು, ಮದುವೆ ಮಧುಚಂದ್ರ, ಸಂಸಾರ ಮಧುಮೇಹ. ತೃಪ್ತಿಯ ಪಥವೇ ಪಥ್ಯ ಎಂದರಿತರೆ ಸಂಸಾರ ಸುಲಭ!

ಎಚ್.ಎಸ್. ರಾಘವೇಂದ್ರ, ಬೆಂಗಳೂರು
*ಹೆಂಗಸರು ತಮ್ಮ ವಯಸ್ಸು ಐವತ್ತಾಗಿದ್ದರೂ 30+ ಎಂದು ಹೇಳಿಕೊಳ್ಳುವುದು ಏಕೆ?*
ಹೆಣ್ಣು ಪರ್ಮನೆಂಟ್ ಟೀನೇಜರು. ಟೀನೇಜಿಗೆ ಅವರು ಹೇಳಿದುದನ್ನು ಕೂಡಿದರೆ ಅವರ ನಿಜ ವಯಸ್ಸು! 19+30=49!

ಪಿ.ಎನ್. ಶ್ರೀವತ್ಸ, ಬೆಂಗಳೂರು
*ರಾಜ್ಯದಲ್ಲಿ ಬರಗಾಲ ಕಾಲಿಡುತ್ತಿದ್ದಂತೆ ಪುಢಾರಿಗಳಿಗೆ ಸುಗ್ಗಿಯೇ ಸುಗ್ಗಿಯಲ್ಲವೇ?*
ನಿಜ. ಹದ್ದುಗಳಿಗೆ ಹೆಣವೇ ಹಬ್ಬ!

■ ರಾಮ್